ಕಾರ್ಖಾನೆಯು ದಿನಾಂಕ: 13–7–2001 ರಿಂದ ಉತ್ಪಾದನೆಯನ್ನು ಸ್ಥಗಿತಗೊಳಿಸಿರುತ್ತದೆ.

ನಷ್ಟದಲ್ಲಿದ್ದ ಸದರಿ ಹೆಂಚಿನ ಕಾರ್ಖಾನೆಯು, ಉತ್ತರ ಕನ್ನಡ ಜಿಲ್ಲೆ ಕೇಂದ್ರ ಸಹಕಾರ ಬ್ಯಾಂಕ್‌ಗೆ (ಕೆ.ಡಿ.ಸಿ.ಸಿ. ಬ್ಯಾಂಕ್) ಸಾಲ ಮರುಪಾವತಿಸಲು ಸಾಧ್ಯವಾಗದೇ ಇದ್ದುದರಿಂದ ಮತ್ತು ದುಡಿಮೆ ಬಂಡವಾಳದ ಕೊರತೆಯಿಂದಾಗಿ ಕಾರ್ಖಾನೆಯು ಮುಚ್ಚಲ್ಪಟ್ಟಿರುತ್ತದೆ.

ಆ) ಸದರಿ ಕಾರ್ಖಾನೆಯು ಬ್ಯಾಂಕ್‌ನ ಅವಧಿ ಸಾಲ, ದುಡಿಮೆ ಬಂಡವಾಳ ಸಾಲ, ಬ್ಯಾಂಕ್ ಬಡ್ಡಿ, ಪಿಎಫ್, ಕಾರ್ಮಿಕರ ಗ್ರ್ಯಾಚುಟಿ ಬಾಕಿ, ಸಾರ್ವಜನಿಕರ ಠೇವಣಿ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಒಟ್ಟು ₹ 400.00 ಲಕ್ಷಗಳ ಹಣವನ್ನು ಬಾಕಿ ಉಳಿಸಿಕೊಂಡಿರುತ್ತದೆ. ಪ್ರವರ್ತಕರು ಕಾರ್ಖಾನೆಯನ್ನು ಪುನಃಶ್ಚೇತನಗೊಳಿಸಲು, ಬ್ಯಾಂಕ್ ಸಾಲ ಕಟ್ಟಲು ಹಾಗೂ ಅವರ ಪಾಲಿನ ವಂತಿಕೆಯನ್ನು ಭರಿಸಲು ಸಾಧ್ಯವಿಲ್ಲದ ಕಾರಣ ಉತ್ಪಾದನೆಯನ್ನು ಪುನರಾಂಭಿಸಲು ಮುಂದೆ ಬಂದಿರುವುದಿಲ್ಲ.

ಕ್ರೀಡಾ ವಸತಿ ಶಾಲೆ ಪ್ರಾರಂಭಿಸುವುದು

2100(2490); ಶ್ರೀ ಮನೋಹರ್ ಎಚ್. ತಹಶೀಲ್ದಾರ್ (ಹಾನಗಲ್)

ಅ) ಹಾನಗಲ್ಲ ತಾಲ್ಲೂಕಿನಲ್ಲಿ "ಏಕಲವ್ಯ" ಕ್ರೀಡಾ ವಸತಿ ನಿಲಯ ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;

ಆ) ಪ್ರಸ್ತುತ ವರ್ಷದಲ್ಲಿ ಪ್ರಾರಂಭ ಮಾಡಲಾಗುವುದೇ;

ಇ) ಅಕ್ಕಿ ಅಲೂರಿನಲ್ಲಿ ಹೊಸ ಕ್ರೀಡಾಂಗಣ ಪ್ರಾರಂಭಿಸಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಕೆ. ಅಭಯಚಂದ್ರ (ಮಾನ್ಯ ಯುವಜನ ಸೇವಾ ಮತ್ತು ಮೀನುಗಾರಿಕೆ ಸಚಿವರು)

ಅ) ಇಲಾಖೆಯಲ್ಲಿ ಇಂತಹ ಯಾವುದೇ ಯೋಜನೆ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ

ಇ) ಅಕ್ಕಿ ಆಲೂರಿನಲ್ಲಿ ಹೊಸ ಕ್ರೀಡಾಂಗಣ ನಿರ್ಮಾಣ ಮಾಡಲು ಸರ್ಕಾರದ ಮಟ್ಟದಲ್ಲಿ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಹಾನಗಲ್ ತಾಲ್ಲೂಕು ನೀರಾವರಿ ಯೋಜನೆಗಳು

2101(2491); ಶ್ರೀ ಮನೋಹರ್ ಎಚ್. ತಹಶೀಲ್ದಾರ್ (ಹಾನಗಲ್)

ಅ) ಹಾನಗಲ್ ತಾಲ್ಲೂಕಿನ ಏತನೀರಾವರಿ ಯೋಜನೆಗೆ ಹಣಕಾಸು / ತಾಂತ್ರಿಕ ಪ್ರಕ್ರಿಯೆ ಪೂರ್ಣಗೊಳಿಸಿ ಪ್ರಾರಂಭಿಸುವ ಉದ್ದೇಶ ಸರ್ಕಾರಕ್ಕೆ ಇದೆಯೆ; ಎಂದಿನಿಂದ ಪ್ರಾರಂಭಿಸಲಾಗುವುದು;

ಆ) (Lift to tank) ಕೆರೆ ತುಂಬುವ ಯೋಜನೆಯಡಿ ವರದಾ ನದಿಯಿಂದ ನರೇಗಲ್ಲ ಮತ್ತು ವರ್ದಿ ಗ್ರಾಮಗಳ ಕೆರೆಗಳಿಗೆ ನೀರು ತುಂಬಿಸುವ ಯೋಜನೆ ಎಂದಿನಿಂದ ಪ್ರಾರಂಭಿಸಲಾಗುವುದು.

ಇ) ಶಿಗ್ಗಾಂವಿ ಏತನೀರಾವರಿ ಯೋಜನೆಯಲ್ಲಿ ಕೇವಲ 6 ಹಳ್ಳಿಗಳು ಮಾತ್ರ ಒಳಪಟ್ಟಿದ್ದು ಇನ್ನೂ ಹಲವಾರು ಗ್ರಾಮಗಳಿಗೆ ವಿಸ್ತರಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆಯೆ;

ಈ) ಯಾವಾಗ ಪ್ರಾರಂಭಿಸಲಾಗುವುದು ಹಾಗೂ ಎಷ್ಟು ಹಳ್ಳಿಗಳನ್ನು ಸೇರಿಸಲಾಗುವುದು;

ಉ) UTP (ತುಂಗಾ ಮೇಲ್ದಂಡೆ) ಯೋಜನೆ ಈಗಾಗಲೇ ಮುಕ್ತಾಯ ಹಂತದಲ್ಲಿದ್ದು, ಯೋಜನೆಯ ಕೊನೆಯ ಭಾಗವಾದ ಹಾನಗಲ್ ತಾಲೂಕಿನ ಎಷ್ಟು ಹಳ್ಳಿಗಳು ಯೋಜನೆ ವ್ಯಾಪ್ತಿಗೆ ಸೇರಿವೆ ಅವು ಯಾವುವು;